ವಿಷಯ: ಅರಣ್ಯ ಇಲಾಖೆಯಲ್ಲಿ ಉಪಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರ ಹುದ್ದೆಯನ್ನು ಕುಂದಾಪುರಕ್ಕೆ ಸ್ಥಳಾಂತರಿಸುವ ಬಗ್ಗೆ

1211 (1745)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ (ಸಂಶೋಧನೆ) ಈ ಹುದ್ದೆಯನ್ನು ಉಪಅರಣ್ಯ ಸಂರಕ್ಷಣಾಧಿಕಾರಿರವರ ತಾಂತ್ರಿಕ ಸಹಾಯಕರು ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎಂದು ಪರಿವರ್ತಿಸಿ ಕುಂದಾಪುರಕ್ಕೆ ಸ್ಥಳಾಂತರಿಸಿರುವುದು ನಿಜವಲ್ಲವೆ?

ಆ) ಈ ಕ್ರಮದಿಂದ ಅರಣ್ಯ ಬೆಳವಣಿಗೆಗೆ ಬಹಳಷ್ಟು ಅನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಈ ಹುದ್ದೆಯನ್ನು ಅಲ್ಲಿಯೇ ಇನ್ನೂ ಕೆಲವು ವರ್ಷ ಮುಂದುವರಿಸಲಾಗುವುದೇ?

ಇ) ಸದರಿ ಹುದ್ದೆಯನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಇಲಾಖೆಯು ಆಲೋಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ನೀಡುವುದು)

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ಹೌದು.

ಆ) ಕುಂದಾಪುರ ವಿಭಾಗ ವ್ಯಾಪ್ತಿಯಲ್ಲಿ ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಕಾರ್ಯಕ್ರಮಗಳನ್ನು ಬೃಹತ್ ಪ್ರಮಾಣದಲ್ಲಿ ಹಮ್ಮಿಕೊಂಡಿದ್ದು, ಪ್ರಾರಂಭಿಕವಾಗಿ ಇದನ್ನು ವ್ಯವಸ್ಥಿತವಾಗಿ ರೂಪಿಸಿಕೊಳ್ಳಲು ಇದೇ ಉದ್ದೇಶಕ್ಕಾಗಿ ಒಬ್ಬ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿರವರನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ಇವರ ತಾಂತ್ರಿಕ ಸಹಾಯಕರನ್ನಾಗಿ ಒದಗಿಸಲು ಉದ್ದೇಶಿಸಿ ಹುದ್ದೆಯನ್ನು ಸ್ಥಳಾಂತರಿಸಿ ನೀಡಲಾಗಿದೆ. ಆದರೆ ಈ ಕಾರ್ಯಕ್ರಮದ ರೂಪರೇಶೆಗಳ ಮಾಹಿತಿ ಹಾಗೂ ಇದರ ನಿರ್ವಹಣೆ ಬಗ್ಗೆ ಸಂಬಂಧಿಸಿದ ಉಪ ವಿಭಾಗಗಳ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಕಾರ್ಯೋನ್ಮುಖರಾಗಿರುವುದರಿಂದ ಈ ಬಗ್ಗೆ ವಿಭಾಗ ಕಛೇರಿಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಂತದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಸೇವೆ ಅಗತ್ಯವಿಲ್ಲ. ರಾಜ್ಯದ ಇತರೇ ಯಾವುದೇ ವಿಭಾಗದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಂತದಲ್ಲಿ ತಾಂತ್ರಿಕ ಸಹಾಯಕರನ್ನು ಒದಗಿಸಿರುವುದಿಲ್ಲ. ಕುಂದಾಪುರ ವಿಭಾಗಕ್ಕೆ ಎರಡು ಉಪ

ವಿಭಾಗಗಳಿದ್ದು ಕ್ಷೇತ್ರೀಯ ಕೆಲಸಗಳಿಗೆ ಈ ಎರಡು ಹುದ್ದೆಗಳು ಸಾಕಾಗುವುದರಿಂದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ಇವರ ತಾಂತ್ರಿಕ ಸಹಾಯಕ ಹುದ್ದೆಯನ್ನು ಮುಂದುವರಿಸುವ ಉದ್ದೇಶವಿರುವುದಿಲ್ಲ.

ಇ) ಜಿಲ್ಲಾ ಪುನರ್ ವಿಂಗಡೆ ರಚನೆಯಿಂದಾಗಿ ಶಾಸನಾತ್ಮಕ ಕ್ರಮಗಳ ಪೈಕಿ, ಹೊಸ ಜಿಲ್ಲೆಗಳಿಗೆ ರಚಿಸಬೇಕಾಗಿದೆ. ಆದರೆ ಹೊಸ ಹುದ್ದೆಗಳನ್ನು ಸೃಷ್ಟಿಸಲು ನಿರ್ಭಂಧವಿರುವುದರಿಂದ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ಇವರ ತಾಂತ್ರಿಕ ಸಹಾಯಕರ ಹುದ್ದೆಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ ಹಂತಕ್ಕೆ ಉನ್ನತೀಕರಿಸಿ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಜಿಲ್ಲಾ ಪಂಚಾಯತ್ ಉಡುಪಿ ಹುದ್ದೆಯಾಗಿ ಪರಿವರ್ತಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ: ಪಶುಸಂಗೋಪನಾ ಇಲಾಖೆಗೆ ಸೇರಿದ ಸ್ವಂತ ಕಟ್ಟಡಗಳು

1212 (1743)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಗೆ ಸೇರಿದ ಸ್ವಂತ ಕಟ್ಟಡಗಳು ಎಷ್ಟು? ಬಾಡಿಗೆ ಕಟ್ಟಡಗಳು ಎಷ್ಟು?

ಆ) 1995-96, 1996-97, 1997-98ರಲ್ಲಿ ಎಷ್ಟು ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆಯೇ?

ಇ) ಇದಕ್ಕಾಗಿ 1998-99ರಲ್ಲಿ ಎಷ್ಟು ಹಣವನ್ನು ಆಯವ್ಯಯದಲ್ಲಿ ಇಡಲಾಗಿದೆ? (ವಿವರ ನೀಡುವುದು)

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು):

ಅ) 1. ಸ್ವಂತ ಕಟ್ಟಡಗಳು - 2487

2. ಬಾಡಿಗೆ ಕಟ್ಟಡಗಳು - 96

ಆ) 1. 1995-96 - 125

2. 1996-97 - 173